(ಆ) ೧೯೮೨-೮೩, ೮೩-೮೪ನೇ ಸಾಲಿನಲ್ಲಿ ಸರಕಾರಿ ಮೆಡಿಕಲ್ ಕಾಲೇಜುಗಳಲ್ಲಿ ಸೇರಿದ ವಿದ್ಯಾರ್ಥಿಗಳ ಕಾಲೇಜುವಾರು ಸಂಖ್ಯೆ ಎಷ್ಟು ?

(ಆ) ಕಾಲೇಜುವಾರು ಯಾವ ಯಾವ ಜಾತಿಯವರು ಎಷ್ಟೆಷ್ಟು ಜನರಿದ್ದಾರೆ ?

ಕಾರ್ಮಿಕರ ವಿವಾದಗಳಲ್ಲಿ ಪೋಲಿಸರ ಮಧ್ಯೆ ಪ್ರವೇಶದ ಬಗ್ಗೆ.

೨೨೨. ಶ್ರೀ ಎಸ್. ಸೂರ್ಯನಾರಾಯಣರಾವ್ (ಪತ್ತೂರು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

(ಅ) ಕಾರ್ಮಿಕ ವಿವಾದಗಳಲ್ಲಿ ೧೯೮೨-೮೩ ಮತ್ತು ೧೯೮೩-೮೪ನೇ ಸಾಲಿನಲ್ಲಿ ಇಲ್ಲಿಯವರೆಗೂ ಪೋಲೀಸರು ಎಷ್ಟು ಕಾರ್ಮಿಕ ವಿವಾದಗಳಲ್ಲಿ ಮಧ್ಯೆ ಪ್ರವೇಶಿಸಿದ್ದಾರೆ ಮತ್ತು ಇವುಗಳಲ್ಲಿ ಆಡಳಿತ ವರ್ಗದವರು ಕೊಟ್ಟ ದೂರುಗಳ ಮೇಲೆ ಈ ಮಧ್ಯ ಪ್ರವೇಶವಾಗಿರುವುದು ಎಷ್ಟು ಬಾರಿ ;

(ಆ) ಈ ರೀತಿ ಮಧ್ಯ ಪ್ರವೇಶದ ಪ್ರಸಂಗಗಳಲ್ಲಿ ಕಾರ್ಮಿಕ ಮುಖಂಡರುಗಳ ಮೇಲೆ ಒಟ್ಟು ಎಷ್ಟು ಮೊಕದ್ದಮೆಗಳನ್ನು ಹಾಕಲಾಗಿದೆ ಮತ್ತು ಎಷ್ಟು ಮೊಕದ್ದಮೆಗಳ ತೀರ್ಮಾನ ಎರಡು ವರ್ಷಕ್ಕಿಂತಲೂ ಹೆಚ್ಚು ಮೂರು ವರ್ಷಕ್ಕಿಂತಲೂ ಹೆಚ್ಚು ಮತ್ತು ಐದು ವರ್ಷಕ್ಕಿಂತಲೂ ಹೆಚ್ಚು ತಡವಾಗಿದೆ ;

(ಇ) ಮೊಕದ್ದಮೆಗಳನ್ನು ಸರ್ಕಾರದವರು ಹಿಂತೆಗೆದುಕೊಳ್ಳುವ ಭರವಸೆ ನೀಡುವರೇ ?

(ಈ) ಈ ರೀತಿಯ ಕಾರ್ಮಿಕ ವಿವಾದಗಳ ಮಧ್ಯವರ್ತಿಯಲ್ಲಿ ಅಕ್ರಮ ಮಧ್ಯ ಪ್ರವೇಶಗಳನ್ನು ತಡೆಗಟ್ಟಲು ಮತ್ತು ಕಾರ್ಮಿಕರಿಗೆ ತಮ್ಮ ಹಕ್ಕಿನ ಚಲಾವಣೆಯಲ್ಲಿ ಅಡ್ಡಿಯುಂಟಾಗದಂತೆ ಪೋಲೀಸರು ಕ್ರಮಬದ್ಧವಾಗಿ ಕಾರ್ಯ ನಿರ್ವಹಿಸಲು ಸರ್ಕಾರದವರು ನಿರ್ದೇಶಕ ಸೂತ್ರಗಳನ್ನು ರಚಿಸಿದ್ದಾರೆಯೇ ?

(ಉ) ರಚಿಸಿಲ್ಲದಿದ್ದರೆ ತಕ್ಷಣ ಈ ಬಗ್ಗೆ ಕ್ರಮ ಕೈಗೊಳ್ಳುವುದೆಂದು ಸರ್ಕಾರವು ಭರವಸೆ ನೀಡುವುದೇ ?

ಶ್ರೀ ರಾಮಕೃಷ್ಣ ಹೆಗಡೆ —(ಮಾನ್ಯ ಮುಖ್ಯಮಂತ್ರಿಗಳು)

(ಅ) ಇಲ್ಲ.

(ಆ) ಕಾರ್ಮಿಕ ವಿವಾದಗಳ ಬಗ್ಗೆ ಯಾವ ದಾವೆಗಳೂ ದಾಖಲಾಗಿಲ್ಲ.

(ಇ) ಕಾರ್ಮಿಕ ವಿವಾದಗಳಲ್ಲಿ ಆರಕ್ಷಕರು ಮಧ್ಯ ಪ್ರವೇಶಿಸಿಲ್ಲ. ಆದಾಗ್ಯೂ ಕೆಲವು ನಿರ್ದಿಷ್ಟ ದೂರುಗಳಲ್ಲಿ ಸಂಜ್ಞೇಯ ಅಪರಾಧಗಳು ಕಂಡು ಬಂದಲ್ಲಿ, ದಾವೆಗಳನ್ನು ದಾಖಲು ಮಾಡಿದೆ. ಈ ದಾವೆಗಳನ್ನು ಹಿಂದೆಗೆದುಕೊಳ್ಳುವುದರ ಬಗ್ಗೆ ಅವುಗಳ ಅರ್ಜಿತೆಯ ಆದಾರದ ಮೇಲೆ ನಿರ್ಧಾರವನ್ನು ಕೈಗೊಳ್ಳಲಾಗುವುದು.

(ಈ) ಕಂಡ (ಅ) ಮತ್ತು (ಆ) ಗಳಿಗೆ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

(ಉ) ಖಂಡ (ಈ) ಗೆ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಸರೆಂಡರ್ ಆಗಿರುವ ಹಣ

೨೧೦. ಶ್ರೀ ಬಿ. ಜಿ. ಬಣಕಾರ್ (ಹಿರೇಕೆರೂರು) ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಹಣಕಾಸು ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

(ಅ) ೧೯೮೨-೮೩ನೇ ಸಾಲಿನ ಬಾಬ್ತು ಮಾರ್ಚ್ ೩೧ರ ಕೊನೆಗೆ ಸರ್ಕಾರದ ಯಾವ ಯಾವ ಖಾತೆ ಇಲಾಖೆಗಳಲ್ಲಿ ಎಷ್ಟೆಷ್ಟು ಹಣ ಸರೆಂಡರ್ ಆಗಿದೆ ?

(ಆ) ೧೯೮೨-೮೩ನೇ ಸಾಲಿನ ತಾರೀಖು ೧-೪-೧೯೮೩ ರಿಂದ ೩೧-೩-೧೯೮೪ರ ಒಳಗೆ ಮಾರ್ಚ್ ತಿಂಗಳಲ್ಲಿ ಯಾವ ಯಾವ ಖಾತೆ ಡಿಪಾರ್ಟ್‌ಮೆಂಟಿನಲ್ಲಿ ಎಷ್ಟೆಷ್ಟು ಹಣ ಖರ್ಚಾಗಿದೆ ?